ಅಧ್ಯಕ್ಷರು: ಮಾನ್ಯ ಕಾಗೇರಿಯವರೆ, ಉತ್ತರ ಕೊಟ್ಟರೆ ಈಗ ಇರುವ ಪ್ರಕಾರ ಕೊಟ್ಟುಬಿಡುತ್ತಾರೆ. ಮತ್ತೆ ಉತ್ತರವನ್ನು ತಂದು ಒದಗಿಸಿಕೊಂಡು ತಲೆಯ ಮೇಲೆ ಕಲ್ಲು ಹಾಕಿಕೊಳ್ಳುವುದು ಬೇಡ. ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅದನ್ನು ಗಂಭೀರವಾಗಿ ಸ್ವೀಕಾರ ಮಾಡೋಣ. ದಯವಿಟ್ಟು ಒಂದು ತಿದ್ದುಪಡಿ ಮಾಡಿ.

ಮಾನ್ಯ ಎಂ.ಟಿ. ಕೃಷ್ಣಪ್ಪನವರು ಮಾತನಾಡುವುದು.

4. **ವಿಷಯ:** ತುಮಕೂರು ಜಿಲ್ಲೆಯಲ್ಲಿ ವರ್ಗಾವಣೆಯಿಂದ ಖಾಲಿಯಾಗಿರುವ ಜಿಲ್ಲಾಧಿಕಾರಿ ಹುದ್ದೆಗೆ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ.

*****

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಅಧ್ಯಕ್ಷರೆ, ನಮ್ಮ ತುಮಕೂರು ಜಿಲ್ಲೆಯಲ್ಲಿ ಡಿ.ಸಿ ಯವರೆ ಇಲ್ಲ. ಸುಮಾರು ಒಂದು ತಿಂಗಳು ಆಯಿತು. ನಮ್ಮ ಜಿಲ್ಲೆಯಲ್ಲಿ ಸತತವಾದ ಬರಗಾಲವಿದೆ. ಕುಡಿಯುವ ನೀರಿನ ಕಾರ್ಯಕ್ರಮವನ್ನು ಚಾಲನೆ ಮಾಡಲು ಹಣವನ್ನೆಲ್ಲಾ ಅವರಿಗೇ ಕೊಡುತ್ತಾರೆ. ಬರಗಾಲದ್ದೂ ಅವರಿಗೇ ಕೊಡುತ್ತಾರೆ. ಸಣ್ಣಪುಟ್ಟ ಕೆಲಸ ಆಗುವುದಕ್ಕೆ ಜನ ಅವರ ಹತ್ತಿರ ಹೋಗಬೇಕು. ಡಿ.ಸಿ.ಯವರೇ ಇಲ್ಲವೆಂದರೆ ಹೇಗೆ?

ಅಧ್ಯಕ್ಷರು: ಬೇಗ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಿ.

ಶ್ರೀ ಎಂ.ಟಿ. ಕೃಷ್ಣಪ್ಪ: ಮಾನ್ಯ ಜಯಚಂದ್ರರವರ candidate ಇನ್ನೂ ಸಿಕ್ಕಿಲ್ಲವೇ ಅಥವಾ ಹುಡುಕುತ್ತಿದ್ದಾರಾ? ನೇಮಕ ಮಾಡುತ್ತಾರಾ?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಆದಷ್ಟು ಬೇಗ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡುತ್ತೇವ.

ಶ್ರೀ ಡಿ.ಎನ್. ಜೀವರಾಜ್: ಅದು ಹೇಗೆ ಸಾರ್? ನಿಮ್ಮ candidate I.A.S ಆಗಿರುವವರು ಬರಬೇಕು. ಇವರ candıdate ಅಂದರೆ ಹೇಗೆ?

ಶ್ರೀ ಎಂ.ಟಿ. ಕೃಷ್ಣಪ್ಪ: ಒಂದು ತಿಂಗಳು ಆಯಿತು ಡಿ.ಸಿ. ಇಲ್ಲದೇ ನಾವು ಅಲ್ಲಿ ಏನು ಕೆಲಸ ಮಾಡುವುದು?

ಅಧ್ಯಕ್ಷರು: ಜಿಲ್ಲಾಧಿಕಾರಿಗಳನ್ನು ಆದಷ್ಟು ಬೇಗ ನೇಮಕ ಮಾಡುತ್ತೇವೆ ಎಂದು ಹೇಳಿದ್ದಾರಲ್ಲಾ.

ಶ್ರೀ ಟಿ.ಬಿ. ಜಯಚಂದ್ರ: ಅಲ್ಲಿ ಯಾವುದೇ ಕೆಲಸ ನಿಂತಿಲ್ಲ. ಎಲ್ಲಾ ಕೆಲಸ ನಡೆಯುತ್ತಿದೆ.

ಅಧ್ಯಕ್ಷರು: ಮಾನ್ಯ ಕೆ.ಬಿ.ಪ್ರಸನ್ನಕುಮಾರ್‌ರವರು ಮಾತನಾಡುವುದು.

5. ವಿಷಯ: ರಾಜ್ಯದ ನಗರ ಪ್ರದೇಶಗಳ ಹೈಸ್ಕೂಲ್ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಶಾಲೆಗಳಲ್ಲಿ ಉಚಿತವಾಗಿ ಸೈಕಲ್ ಕೊಡುವುದನ್ನು ನಿಲ್ಲಿಸಿರುವುದರಿಂದ ಆಗುತ್ತಿರುವ ತೊಂದರೆ ಬಗ್ಗೆ.

*****

ಶ್ರೀ ಕೆ.ಬಿ. ಪ್ರಸನ್ನಕುಮಾರ್ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ನಗರ ಪ್ರದೇಶಗಳಲ್ಲಿ ಓದುತ್ತಿರುವ ಹೈಸ್ಕೂಲ್ ಮಕ್ಕಳಿಗೆ ಸೈಕಲ್‌ಅನ್ನು ಕಳೆದ ಬಾರಿಯಿಂದ ಕೊಡುತ್ತಿಲ್ಲ. ಮಲತಾಯಿಧೋರಣೆ ಮಾಡುತ್ತಿದ್ದಾರೆ. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಹಾಕುತ್ತಿದ್ದಾರೆ. ದಯಮಾಡಿ ಅವರಿಗೂ ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಸೈಕಲ್ ಕೊಡುವ ಮೂಲ ಉದ್ದೇಶ, ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗಳು ಮನೆಯಿಂದ ದೂರ ಇರುತ್ತದೆ ಅದಕ್ಕೆ ಸೈಕಲ್ ಒದಗಿಸಬೇಕು ಎನ್ನುವಂಥದ್ದು. ತತ್‌ಕ್ಷಣದಲ್ಲಿ ಸರ್ಕಾರದ ಮುಂದೆ ನಗರಪ್ರದೇಶದಲ್ಲಿ ಕೊಡುವಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ಇದನ್ನು ಪರಿಗಣಿಸುತ್ತೇವೆ.